| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 56 ] [ Total No. of Printed Pages : 24

**ಸಂಕೇತ ಸಂಖ್ಯೆ : 85-K** **ವಿಷಯ : ಸಮಾಜ ವಿಜ್ಞಾನ**

**Code No. : 85-K** **Subject : SOCIAL SCIENCE**

(ಕನ್ನಡ ಭಾಷಾಂತರ)

( Kannada Version )

ದಿನಾಂಕ : 22. 06. 2011 ] [ Date : 22. 06. 2011

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಕೆಳಕಂಡವರುಗಳಲ್ಲಿ ಯಾವ ಗವರ್ನರ್-ಜನರಲ್ ಸಾರ್ವಜನಿಕ ಕಾಮಗಾರಿ ಇಲಾಖೆಯನ್ನು ಸ್ಥಾಪಿಸಿದನು ?

(A) ವಿಲಿಯಂ ಬೆಂಟಿಂಕ್

(B) ಕಾರ್ನ್‌ವಾಲೀಸ್

(C) ಲಾರ್ಡ್ ಡಾಲ್‌ಹೌಸಿ

(D) ರಾಬರ್ಟ್ ಕ್ಲೈವ್

*ಉತ್ತರ :* ______________________

2. ಪರಿಣಾಮಕಾರಿ ಶಾಸಕಾಂಗದ ಸೃಷ್ಟಿಯು ಇದು ಪ್ರಾರಂಭವಾಗಲು ಸಹಾಯವಾಯಿತು :

(A) ಆಧುನಿಕ ಪಾರ್ಲಿಮೆಂಟ್

(B) ಆಧುನಿಕ ಪ್ರಜಾಪ್ರಭುತ್ವ

(C) ದ್ವಿಮುಖ ಸರ್ಕಾರ

(D) ದೇಶೀಯ ಸರ್ಕಾರ

*ಉತ್ತರ :* ______________________________

3. ಈಸೂರಿನ ಐದು ಜನರಿಗೆ ಗಲ್ಲು ಶಿಕ್ಷೆಯಾಗಲು ಕಾರಣ ಅವರು

(A) ಮೆರವಣಿಗೆಗಳನ್ನು ಸಂಘಟಿಸಿದರು

(B) ಸರ್ಕಾರಿ ಕೆಲಸದಲ್ಲಿ ಭಾಗವಹಿಸಿದರು

(C) ಅವರ ಗ್ರಾಮವನ್ನು 'ಸ್ವತಂತ್ರ' ಎಂದು ಘೋಷಿಸಿದರು

(D) ಇಬ್ಬರು ಸರಕಾರಿ ಅಧಿಕಾರಿಗಳನ್ನು ಕೊಂದರು

*ಉತ್ತರ :* ______________________________

4. ಸರ್ದಾರ್ ಪಟೇಲರು ಹೈದರಾಬಾದ್ ನಿಜಾಮರ ಮೇಲೆ ಪೊಲೀಸ್ ಕಾರ್ಯಾಚರಣೆ ಕೈಗೊಳ್ಳಲು ಯಾವ ದಿನದಂದು ನಿರ್ಧರಿಸಿದರು ?

(A) ಸೆಪ್ಟೆಂಬರ್ 12, 1948

(B) ಸೆಪ್ಟೆಂಬರ್ 13, 1948

(C) ಸೆಪ್ಟೆಂಬರ್ 14, 1948

(D) ಸೆಪ್ಟೆಂಬರ್ 15, 1948

*ಉತ್ತರ :* ______________________________

5. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ 'ನೂತನ ಯೋಜನೆ'ಯನ್ನು ಯಾವುದಕ್ಕಾಗಿ ಪರಿಚಯಿಸಲಾಯಿತು ?

(A) ಆರ್ಥಿಕ ಸುಧಾರಣೆಗಾಗಿ

(B) ರಾಜಕೀಯ ಸುಧಾರಣೆಗಾಗಿ

(C) ಸಾಮಾಜಿಕ ಸುಧಾರಣೆಗಾಗಿ

(D) ಧಾರ್ಮಿಕ ಸುಧಾರಣೆಗಾಗಿ

*ಉತ್ತರ :* ____________________

6. ಎರಡನೇ ಮಹಾಯುದ್ಧವು ತತ್‌ಕ್ಷಣ ಆರಂಭವಾದದ್ದು

(A) ರಾಷ್ಟ್ರ ಸಂಘವು ಆಕ್ರಮಣಕಾರರನ್ನು ತಡೆಯದಿದ್ದಾಗ

(B) ಮುಸ್ಸೊಲಿನಿಯನ್ನು ತಡೆಯಲಾಗದಿದ್ದುದರಿಂದ

(C) ಜರ್ಮನಿಯು ಪೋಲೆಂಡನ್ನು ವಶಪಡಿಸಿಕೊಂಡಾಗ

(D) ಜಪಾನ್ ಮಂಚೂರಿಯಾವನ್ನು ವಶಪಡಿಸಿಕೊಂಡಾಗ

*ಉತ್ತರ :* ____________________

7. ಸಂವಿಧಾನದ ವಿಧಿ 16 ರಲ್ಲಿ ಸಕಲ ಪ್ರಜೆಗಳಿಗೂ ಸಮಾನ ಅವಕಾಶವನ್ನು ಈ ವಿಷಯದಲ್ಲಿ ನೀಡಿದೆ :

(A) ಖಾಸಗಿ ಉದ್ಯೋಗ

(B) ನಿಷೇಧ (ಶೈಕ್ಷಣಿಕ ಹಕ್ಕು)

(C) ಸಾರ್ವಜನಿಕ ಉದ್ಯೋಗ

(D) ಧಾರ್ಮಿಕ ಆಚರಣೆ

*ಉತ್ತರ :* ____________________

8. ಪ್ರಜಾಪ್ರಭುತ್ವ ಭಾರತದ ಎರಡು ಪ್ರಮುಖ ಸಮಸ್ಯೆಗಳು

(A) ಆರ್ಥಿಕ ಅಸಮಾನತೆ ಹಾಗೂ ಬಡತನ

(B) ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ

(C) ರಾಜಕೀಯ ಹಾಗೂ ಆರ್ಥಿಕ ಅಸಮಾನತೆ

(D) ರಾಜಕೀಯ ಹಾಗೂ ಸಾಮಾಜಿಕ ಅಸಮಾನತೆ

*ಉತ್ತರ :* ____________________

9. 1985 ರಲ್ಲಿ ದಕ್ಷಿಣ ಏಷ್ಯಾದ ಏಳು ರಾಷ್ಟ್ರಗಳು ಈ ಸಂಸ್ಥೆಯನ್ನು ರಚಿಸಿದವು :

(A) ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ ( ASEAN )

(B) ಆಫ್ರಿಕನ್ ಒಕ್ಕೂಟ ಸಂಸ್ಥೆ ( OAU )

(C) ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟ

(D) ಪ್ರಾದೇಶಿಕ ಸಹಕಾರ ಸಂಸ್ಥೆ ( SAARC )

*ಉತ್ತರ :* ____________________

10. ಭಾರತದ ವ್ಯವಸಾಯವನ್ನು ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯಲು ಕಾರಣ ಅದು

(A) ಕೆಲವೊಮ್ಮೆ ನಿಯತಕಾಲಿಕ

(B) ಯಾವಾಗಲೂ ಅನಿಶ್ಚಿತ

(C) ಅಸಮರ್ಪಕ ಹಂಚಿಕೆಯಿಂದ ಕೂಡಿದೆ

(D) ನಿಯತಕಾಲಿಕ, ಅನಿಶ್ಚಿತ ಹಾಗೂ ಅಸಮರ್ಪಕ ಹಂಚಿಕೆಯಿಂದ ಕೂಡಿದೆ

*ಉತ್ತರ :* ____________________

11. ಚಿಕ್ಕ ಕಾಂಡ ಹಾಗೂ ಒರಟಾದ ಹುಲ್ಲು ಜಾತಿಯ ಸಸ್ಯವರ್ಗದ ಉದಾಹರಣೆ

(A) ಶ್ರೀಗಂಧದ ಮರ

(B) ಕಸವಿ

(C) ತೇಗ

(D) ಸಾಲ್

*ಉತ್ತರ :* ______________________________

12. ಈ ಕೆಳಗಿನವುಗಳಲ್ಲಿ ಯಾವುದು ಭಾರತದ ಮೊದಲ ಅಣು ಸ್ಥಾವರವಾಗಿದೆ ?

(A) ಕಲ್ಪಾಕ್ಕಂ

(B) ನರೋರ

(C) ತಾರಾಪುರ್

(D) ಕೈಗಾ

*ಉತ್ತರ :* ______________________________

13. ರಾಸಾಯನಿಕ ಗೊಬ್ಬರದ ಪ್ರಥಮ ಕೈಗಾರಿಕೆಯನ್ನು ಇಲ್ಲಿ ಸ್ಥಾಪಿಸಲಾಯಿತು :

(A) ಮೈಸೂರಿನ ಬೆಳಗೊಳ

(B) ಕೇರಳದ ಆಲ್ವಾಯಿ

(C) ಪಂಜಾಬಿನ ನಂಗಲ್

(D) ಝಾರ್ಖಂಡ್‌ನ ಸಿಂದ್ರಿ

*ಉತ್ತರ :* ______________________________

14. ಕಾಂಟೂರ್ ಮಾದರಿ ಬೇಸಾಯವು ನೀರು ಪೋಲಾಗುವುದನ್ನು ………………… ರಷ್ಟು ತಪ್ಪಿಸುತ್ತದೆ.

(A) 10% ರಿಂದ 20%

(B) 20% ರಿಂದ 30%

(C) 30% ರಿಂದ 40%

(D) 40% ರಿಂದ 50%

*ಉತ್ತರ :* ______________________________

15. ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಎದುರಿಸುತ್ತಿರುವ ಅತಿ ಮುಖ್ಯ ಸಮಸ್ಯೆ

(A) ಸೂಕ್ತ ಯಂತ್ರಗಳ ಅಭಾವ

(B) ಹಣದ ಕೊರತೆ

(C) ಪುರಾತನ ತಂತ್ರಜ್ಞಾನ

(D) ಯೋಗ್ಯ ಮಾರುಕಟ್ಟೆಗಳ ಅಭಾವ

*ಉತ್ತರ :* ______________________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಹನ್ನೆರಡನೆಯ ವಯಸ್ಸಿನಲ್ಲಿ ರಣಜಿತ್‌ಸಿಂಗ್‌ನು ಮುಖ್ಯಸ್ಥನಾದ ಸಿಖ್ ಒಕ್ಕೂಟದ ಶಾಖೆ …………………

……………………………………………………………………………………………………

17. 1963 ರಲ್ಲಿ ಉಗಾಂಡ ಸ್ವತಂತ್ರವಾಗಲು ನೇತೃತ್ವ ವಹಿಸಿದವರು …………………………………………

18. ಮಹಿಳೆಯರಿಗಾಗಿ ತರಬೇತಿ ಮತ್ತು ಉದ್ಯೋಗದ ಯೋಜನೆಯು ಜಾರಿಗೆ ಬಂದ ವರ್ಷ …………………………

19. ಸಾಧಾರಣ ಮಳೆ ಬೀಳುವ ಪ್ರದೇಶಗಳಲ್ಲಿ ಹೆಚ್ಚಿನ ಮಳೆಯನ್ನು ತರುವ ಮಾರುತಗಳು ………………………

……………………………………………………………………………………………………

20. 1965 ರಲ್ಲಿ ಸರ್ಕಾರವು ಜನರಿಗೆ ಅಗತ್ಯ ಸರಕುಗಳನ್ನು ಪೂರೈಸಲು ಸ್ಥಾಪಿಸಿದ ಸಂಸ್ಥೆ …………………

……………………………………………………………………………………………………

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : $5 \times 1 = 5$

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| a) | ಥಾಮಸ್ ಬ್ಯಾಬಿಂಗ್‌ಟನ್ ಮೆಕಾಲೆ | i) | ದುರ್ಬಲ ವರ್ಗಗಳ ಸಂಘ |
| b) | ಮಾಂಟೆಗ್ಯೂ | ii) | ಆಂಗ್ಲೊ–ಓರಿಯಂಟಲ್ ಶಾಲೆ |
| c) | ವಿಠಲ್ ರಾಮ್‌ಜೀ ಶಿಂದೆ | iii) | ಕೇಂದ್ರೀಯ ಹಿಂದೂ ಕಾಲೇಜು |
| d) | ದಯಾನಂದ ಸರಸ್ವತಿ | iv) | ರಾಜ್ಯ ವ್ಯವಹಾರಗಳ ಕಾರ್ಯದರ್ಶಿ |
| e) | ಸರ್ ಸಯ್ಯದ್ ಅಹಮದ್‌ಖಾನ್ | v) | ರಾಮಕೃಷ್ಣ ಮಿಷನ್ |
| | | vi) | ವೇದಗಳಿಗೆ ಹಿಂತಿರುಗಿ |
| | | vii) | ಮೊದಲ ಕಾನೂನು ಸದಸ್ಯ |
| | | viii) | ಪ್ರಾರ್ಥನಾ ಸಮಾಜ |

*ಉತ್ತರಗಳು :* a) ______________________

b) ______________________

c) ______________________

d) ______________________

e) ______________________

IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : 9 × 1 = 9

22. ಮಚಲಿಪಟ್ಟಣದಲ್ಲಿ ಮೊದಲು ವ್ಯಾಪಾರ ಮಳಿಗೆಯನ್ನು (ಕಂಪನಿಯನ್ನು) ಯಾರು ಸ್ಥಾಪಿಸಿದರು ?

23. 1957 ರಲ್ಲಿ ರಷ್ಯಾದಲ್ಲಾದ ಬಾಹ್ಯಾಕಾಶ ಸಂಶೋಧನೆಯನ್ನು ನಿದರ್ಶಿಸಿ.

24. ಹಿಟ್ಲರ್ 'ಕಂದು ಅಂಗಿ'ಯನ್ನು ಏಕೆ ಕಟ್ಟಿದನು ?

25. ವಿಶ್ವ ವಾಣಿಜ್ಯ ಸಂಸ್ಥೆಯ ಪ್ರಮುಖ ಗುರಿ ಏನು ?

26. ಮಾನವನ ಹಕ್ಕುಗಳ ದಿಸೆಯಲ್ಲಿನ ಎರಡು ಪ್ರಮುಖ ಘಟನೆಗಳಾವುವು ?

27. ಶಾಂತಿಯುತಕ್ಕಾಗಿ ಅಣುಶಕ್ತಿ ಎಂಬ ಭಾರತದ ನಿಲುವನ್ನು ಅಮೇರಿಕವು ಯಾವುದರಿಂದ ಸರಿಯಾಗಿ ಗ್ರಹಿಸಿತು ?

28. ಹಿಮಾಲಯವು ವಿಶಿಷ್ಟ ಪ್ರಕಾರದ ಪ್ರಾಣಿಗಳ ಆವಾಸ ಸ್ಥಾನವೆಂದು ಹೇಗೆ ಹೇಳಬಹುದು ?

29. ನಮ್ಮ ಸಾರಿಗೆ ಪದ್ಧತಿಗೆ ಹೊಸ ಸೇರ್ಪಡೆ ಯಾವುದು ?

30. 'ಆರ್ಥಿಕ ಯೋಜನೆ' ಎಂದರೇನು ?

V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡೆರಡು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. 'ಕರ್ನಾಟಕ ಚರ್ಕವರ್ತಿ' ಎಂಬ ಬಿರುದನ್ನು ಯಾರು ಹೊಂದಿದ್ದರು ? ಅವರು ಆಡಳಿತವನ್ನು ಹೇಗೆ ವ್ಯವಸ್ಥೆಗೊಳಿಸಿದ್ದರು ?

32. ಚಾಮರಾಜೇಂದ್ರ ಒಡೆಯರ್ ಕಾಲದ ದಿವಾನರುಗಳ ಕಾಣಿಕೆಗಳಾವುವು ?

33. ರಾಷ್ಟ್ರೀಯತೆಯೆಡೆಗೆ ಜನರಿಗೆ ಪತ್ರಿಕೆಗಳು ಹೇಗೆ ಸಹಾಯವಾದವು ?

34. ಹಿಂದೂಸ್ಥಾನ ಸೇವಾದಳದ ಉದ್ದೇಶವೇನು ? ಅದನ್ನು ಯಾರು ಸ್ಥಾಪಿಸಿದರು ?

35. ಫಜಲ್ ಆಲಿ ಆಯೋಗವನ್ನು ಸರ್ಕಾರವು ಏಕೆ ರಚಿಸಿತು ? ಅದರ ಪರಿಣಾಮವೇನು ?

36. ಒಂದನೆಯ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನು ?

37. 'ಶೀತಲ ಸಮರ'ವು ಬಹುಮಟ್ಟಿಗೆ ಹೇಗೆ ಕೊನೆಗೊಂಡಿದೆ ?

38. ವರದಕ್ಷಿಣೆಯನ್ನು ತಡೆಗಟ್ಟಲು ಯಾವುದಾದರೂ ಎರಡು ಕ್ರಮಗಳನ್ನು ಹೆಸರಿಸಿ.

39. ಅಲಿಪ್ತ ನೀತಿಯು ಯಾವುದರ ಮೇಲೆ ಅವಲಂಬಿತವಾಗಿದೆ ? ಅದನ್ನು ಎಲ್ಲಿ ತಿಳಿಸಲಾಗಿದೆ ?

40. ಯುದ್ಧದಿಂದ ಪ್ರಪಂಚವನ್ನು ರಕ್ಷಿಸಲು ಮಾಡಿಕೊಂಡಿರುವ ಪ್ರಮುಖ ಒಪ್ಪಂದಗಳಾವುವು ?

41. ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳನ್ನು ವ್ಯತ್ಯಾಸಿಸಿ.

42. ಮ್ಯಾಂಗನೀಸ್‌ನ ಮುಖ್ಯ ಅದಿರುಗಳನ್ನು ನಮೂದಿಸಿ.

43. ಕೈಗಾರಿಕೆಗಳ ಸ್ಥಾಪನೆಗೆ ಅವಶ್ಯಕವಾದ ಯಾವುದಾದರೂ ನಾಲ್ಕು ಅಂಶಗಳನ್ನು ಬರೆಯಿರಿ.

44. 'ಇ-ಮೇಲ್' - ಇದನ್ನು ವಿವರಿಸಿ.

45. ಗೃಹ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಏಳಿಗೆಗಾಗಿ ದುಡಿಯುತ್ತಿರುವ ವಿವಿಧ ಮಂಡಳಿಗಳಾವುವು ?

46. ಯೋಜನಾ ಆಯೋಗದ ಎರಡು ಕಾರ್ಯಗಳು ಏನು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಭಾರತದಲ್ಲಿ ಫ್ರೆಂಚ್ ಪ್ರಾಬಲ್ಯವು ಕ್ಷೀಣಿಸಲು ಕಾರಣಗಳೇನಾಗಿದ್ದವು ?

48. 1857 ರ ದಂಗೆಯು ಏಕೆ ವಿಫಲವಾಯಿತು ?

49. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತವನ್ನು ರಕ್ಷಿಸಲು ಕೈಗೊಂಡಿರುವ ವಿವಿಧ ಕ್ರಮಗಳನ್ನು ನಮೂದಿಸಿ.

50. ಮಣ್ಣು ಸವೆತವನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು ?

51. ಸೆಣಬು ಬೆಳೆಯಲು ಅವಶ್ಯವಾಗಿರುವ ಭೌಗೋಳಿಕ ಅಂಶಗಳಾವುವು ? ಭಾರತದಲ್ಲಿ ಸೆಣಬು ಬೆಳೆಯುವ ಪ್ರದೇಶಗಳನ್ನು ಹೆಸರಿಸಿ.

52. ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ವಿದೇಶೀ ವ್ಯಾಪಾರವು ಹೇಗೆ ಸಹಾಯವಾಗಿದೆ ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಎಂಟು** ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕೆಳಕಂಡ ನಾಯಕರುಗಳ ಕಾಣಿಕೆಯನ್ನು ವಿವರಿಸಿ :

a) ಮಹಾತ್ಮ ಗಾಂಧೀಜಿ b) ಸುಭಾಷ್ ಚಂದ್ರ ಬೋಸ್

54. ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯನ್ನು ವಿಶ್ವಸಂಸ್ಥೆಯ ಪ್ರಮುಖ ಸಹಾಯಕ ಸಂಸ್ಥೆ ಎಂದು ಹೇಗೆ ನಾವು ಪರಿಗಣಿಸಬಹುದು ?

55. ನಿಯಂತ್ರಿತ ಮಾರುಕಟ್ಟೆಗಳ ವ್ಯವಹಾರಗಳನ್ನು ಯಾರು ನಿರ್ವಹಿಸುವರು ? ಅದರ ಕಾರ್ಯಗಳಾವುವು ?

VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವುದನ್ನು ಗುರುತಿಸಿ : 1 + 3 = 4

a) ಪಾಕ್ ಜಲಸಂಧಿ

b) ಬಿಹಾರಿನ ಕಣ್ಣೀರಿನ ನದಿ

c) ಗೌಹಾತಿ

***ಸೂಚನೆ*** **: ಅಂಧ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ :** (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)

ಜ್ಯೋತಿಬಾ ಫುಲೆಯವರು ಸಲ್ಲಿಸಿರುವ ಸೇವೆಗಳಾವುವು ? 4